C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 256/2019

**ಚಾಸಾ– 27 ಪ್ರಾ.ಸಾ– 13**

| | |
|---|---|
| **ಸಾಕ್ಷಿದಾರರ ಹೆಸರು** | **ಶ್ರೀರಂಗರಾಜು** |
| **ತಂದೆಯ ಹೆಸರು** | **ಆರ್.ರಂಗೇಗೌಡ** |
| **ವಯಸ್ಸು** | **65 ವರ್ಷಗಳು** |
| **ಉದ್ಯೋಗ** | **ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್** |
| **ವಾಸ** | **ಮೈಸೂರು** |

**ದಿನಾಂಕಃ 11.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು ಜೂನ್ 2019 ರಿಂದ ಜೂನ್ 2020 ರವರಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪ ವಿಭಾಗ, ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ10.09.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಪುಟ್ಟಮಾದಯ್ಯ ಬಿನ್ ಕಾಳಯ್ಯ, ನಗರಸಬೆ ವಾರ್ಡ್ ನಂ.13, ಮನೆ ನಂ.381, 6ನೇ ಕ್ರಾಸ್, ಗಾಂಧಿನಗರ, ಮಂಡ್ಯ ರವರಿಗೆ ಕೊಳಾಯಿ ಸಂಪರ್ಕ ಹೊಂದಲು ಕೋರಿರುವ ಪತ್ರ ಹಾಗೂ ಕೊಳಾಯಿ ಮುಂಜೂರು ಮಾಡಿರುವ ದಾಖಲಾತಿಗಳನ್ನು ದೃಡೀಕರಿಸಿ ನೀಡುವಂತೆ ಕೋರಿಕೆಯನ್ನು ಸಲ್ಲಿಸಿದ್ದರು. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–26** ಎಂದು ಗುರುತಿಸಲಾಗಿದೆ. ಅದರಂತೆ ದಿಃ10.10.2019 ರಂದು ಪುಟ್ಟಮಾದಯ್ಯ ರವರ ಹೆಂಡತಿ ಜಯಮ್ಮರವರು ಕೊಳಾಯಿಗಾಗಿ ಸಲ್ಲಿಸಿದ ಅರ್ಜಿಯ ದೃಡೀಕೃತ ನಕಲನ್ನು ಹಾಗೂ ಅವರಿಗೆ ಕೊಳಾಯಿ ಸಂಪರ್ಕ ಮಂಜೂರು ಮಾಡಿರುವ ಆದೇಶದ ದೃಡೀಕೃತ ಪತ್ರಗಳನ್ನು ನನ್ನ ಕವಚ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ

ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ **ನಿಪಿ-27, 28, 29** ಎಂದು ಗುರುತಿಸಲಾಗಿದೆ, ಅವುಗಳಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಗಳನ್ನು **ನಿಪಿ-27ಎ, 28ಎ, 29ಎ** ಎಂದು ಗುರುತಿಸಲಾಗಿದೆ. ಸದರಿ ದಾಖಲೆಗಳ ಅನ್ವಯ ದಿಃ10.04.2012 ರಲ್ಲಿ ಜಯಮ್ಮ ಕೋಂ ಪುಟ್ಟಮಾದಯ್ಯರವರಿಗೆ ಇವರ ಗಾಂಧಿನಗರ 6ನೇ ಕ್ರಾಸಿನಲ್ಲಿರುವ ಮನೆಗೆ ಕೊಳಾಯಿ ಸಂಪರ್ಕ ನೀಡಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:**

1. ಸಾಮಾನ್ಯವಾಗಿ ಯಾವುದೇ ಮನೆಗೆ ಕೊಳಾಯಿ ಸಂಪರ್ಕದ ಮುಂಜೂರು ಮಾಡುವ ಪೂರ್ವದಲ್ಲಿ ಸದರಿ ಮನೆಯ ಮಾಲೀಕತ್ವಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಪರಿಶೀಲನೆ ಮಾಡುತ್ತೇವೆ. ನಿಪಿ-**28** ಆದೇಶದಲ್ಲಿ ಸದರಿ ಜಯಮ್ಮ ಕೋಂ ಪುಟ್ಟಮಾದಯ್ಯರವರ ಮನೆಯ ಮಾಲೀಕತ್ವಕ್ಕೆ ಸಂಬಂದಪಟ್ಟಂತೆ ದಾಖಲೆಗಳನ್ನು ಕೊಳಾಯಿ ಸಂಪರ್ಕ ಮಂಜೂರು ಮಾಡುವ ಪೂರ್ವದಲ್ಲಿ ಪರಿಶೀಲನೆ ಮಾಡಿದ ಬಗ್ಗೆ ಯಾವುದೇ ನಮೂದು ಇರುವುದಿಲ್ಲ. ನಿಪಿ-**27, 28, 29** ದಾಖಲೆಗಳಿಗೆ ಸಂಬಂದಪಟ್ಟಂತೆ ಇರುವ ಕಛೇರಿಯ ಕಡತವನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಕೊಳವೆ ಸಂಪರ್ಕ ನೀಡಬೇಕಾದರೆ ಸದರಿ ಮನೆಗೆ ನಗರಸಬೆಯಿಂದ ಅಥವಾ ಗ್ರಾಮ ಪಂಚಾಯಿತಿಯಿಂದ ನೀಡಿರುವ ಪರವಾನಿಗೆಯನ್ನು ಕಡ್ಡಾಯವಾಗಿ ಪರಿಶೀಲನೆ ಮಾಡಬೇಕು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಯಾ ಸಮಯದಲ್ಲಿ ಸರ್ಕಾರದಿಂದ ಅಥವ ಮಂಡಳಿಯಿಂದ ನೀಡಿರುವ ಸುತ್ತೋಲೆಗಳ ಆಧಾರದ ಮೇಲೆ ಕೊಳವೆ ಸಂಪರ್ಕವನ್ನು ನೀಡಲಾಗುತ್ತದೆ. ತನಿಖಾಧಿಕಾರಿಗಳಿಗೆ ನಾನು ನಿಪಿ-27, 28 ರಂತೆ ದಾಖಲೆಗಳನ್ನ ನೀಡುವ ಸಮಯದಲ್ಲಿ ಜಯಮ್ಮ ಕೋಂ ಪುಟ್ಟಮಾದಯ್ಯರವರ ಮನೆಯ ಮಾಲೀಕತ್ವದ ದಾಖಲೆಗಳ ಯಾವುದೇ ಪ್ರತಿಗಳನ್ನು ನೀಡಿರುವುದಿಲ್ಲ. ತನಿಖಾಧಿಕಾರಿಗಳು ಕೇಳಿರುವ ದಾಖಲೆಗಳನ್ನು ಮಾತ್ರ ನೀಡಿರುತ್ತೇನೆ. ನಿಪಿ-27 ಅರ್ಜಿಯಲ್ಲಿ ಜಯಮ್ಮ ಕೋಂ ಪುಟ್ಟಮಾದಯ್ಯರವರ ಮನೆ ನಂಬರ್ ನಮೂದು ಮಾಡಿರುವುದಿಲ್ಲ. ನಿಪಿ-**28** ಆದೇಶ ಪ್ರತಿಯಲ್ಲಿಯೂ ಸಹಾ ಜಯಮ್ಮ ಕೋಂ ಪುಟ್ಟಮಾದಯ್ಯರವರ ಮನೆ ನಂಬರ್ ನಮೂದು ಆಗಿರುವುದಿಲ್ಲ. ಸದರಿ ಜಯಮ್ಮ ಕೋಂ ಪುಟ್ಟಮಾದಯ್ಯರವರಿಗೆ ಕೊಳಾಯಿ ಸಂಪರ್ಕ ನೀಡಿರುವ ಸ್ವತ್ತಿ ಮಾಲೀಕರು

ಆಗಿರಲೆ ಇಲ್ಲ ಆದಕಾರಣ ಮನೆ ನಂಬರ್ ಅರ್ಜಿಯಲ್ಲಾಗಲೀ ಆದೇಶದಲ್ಲಾಗಲೀ ನಮೂದು ಮಾಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ತನಿಖಾಧಿಕಾರಿಗಳಿಗೆ ಕೇವಲ ದಾಖಲಾತಿಗಳನ್ನು ಮಾತ್ರ ನೀಡಿರುತ್ತೇನೆ. ನಿಪಿ–27, 28 ದಾಖಲೆಗಳು ನಮ್ಮ ಕಛೇರಿಯಲ್ಲಿರುವ ಮೂಲ ಕಡತದಲ್ಲಿ ಲಭ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–27, 28 ದಾಖಲೆಗಳು ಪೋಲೀಸರ ಕೋರಿಕೆಯ ಮೇರೆಗೆ ಪಿರ್ಯಾದಿಯ ಒತ್ತಡದ ಮೇರೆಗೆ ಸುಳ್ಳಾಗಿ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ಜಯಮ್ಮ ಕೋಂ ಪುಟ್ಟಮಾದಯ್ಯರವರು ಯಾವುದೇ ಕೊಳಾಯಿ ಸಂಪರ್ಕ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**